**All India Radio: Bangalore**
**National Bulletins In Kannada**
**03.08.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**03.08.2025 / 7.35 am**

**<><*<><>*><>**

ಮುಖ್ಯಾಂಶಗಳು

**೧. ಬೂತ್‌ಮಟ್ಟದ ಅಧಿಕಾರಿಗಳು ಮತ್ತು ಮೇಲ್ವಿಚಾರಕರ ವೇತನ ಹೆಚ್ಚಿಸಿ ಭಾರತೀಯ ಚುನಾವಣಾ ಆಯೋಗ ಆದೇಶ**

**೨. ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಇಂದು ದೇಶಾದ್ಯಂತ ನೀಟ್ ಪಿಜಿ ಪರೀಕ್ಷೆ**

**೩. ಕೊಸನೋವ್ ಸ್ಮರಣಾರ್ಥ ವಿಶ್ವ ಅಥ್ಲೆಟಿಕ್ ಕಾಂಟಿನೆಂಟಲ್ ಟೂರ್; ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಭಾರತದ ಮುರುಳಿ ಶ್ರೀಶಂಕರ್‌ಗೆ ಚಿನ್ನದ ಪದಕ**

**೪. ವಿಶ್ವ ಕುಸ್ತಿ ಪಂದ್ಯಾವಳಿ; ಭಾರತದ ಲ್ಯಾಕಿಗೆ ಬೆಳ್ಳಿ ಪದಕ, ಅಂತಿಮ ಹಂತ ತಲುಪಿದ ಸಿತೇಂದರ್**

**<><*<><>*><>**

ಬೂತ್‌ಮಟ್ಟದ ಅಧಿಕಾರಿಗಳ ವೇತನವನ್ನು ಭಾರತೀಯ ಚುನಾವಣಾ ಆಯೋಗ ದ್ವಿಗುಣಗೊಳಿಸಿದ್ದು, ಮತದಾರರ ಪಟ್ಟಿ ತಯಾರಿ ಮತ್ತು ಪರಿಷ್ಕರಣೆ ಕಾರ್ಯಗಳಲ್ಲಿ ನಿರತರಾಗಿರುವ ಬಿಎಲ್‌ಒ ಮೇಲ್ವಿಚಾರಕರ ವೇತನವನ್ನು ಹೆಚ್ಚಿಸಿದೆ. ಪರಿಷ್ಕೃತ ವೇತನದಡಿ ಬಿಎಲ್‌ಒ ಗಳಿಗೆ ಈ ಹಿಂದಿನ ಆರು ಸಾವಿರ ರೂಪಾಯಿ ಬದಲು ೧೨ ಸಾವಿರ ವಾರ್ಷಿಕ ವೇತನ ಸಿಗಲಿದೆ. ಅದೇ ರೀತಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕಾಗಿ ನೀಡುವ ಪ್ರೋತ್ಸಾಹ ಧನವನ್ನು ಒಂದು ಸಾವಿರದಿಂದ ೨ ಸಾವಿರ ರೂಪಾಯಿಗೆ ಹೆಚ್ಚಿಸಲಾಗಿದೆ. ಬಿಎಲ್‌ಒ ಮೇಲ್ವಿಚಾರಕರು ಈ ಹಿಂದಿನ ೧೨ ಸಾವಿರ ರೂಪಾಯಿ ಬದಲು, ೧೮ ಸಾವಿರ ರೂಪಾಯಿ ವಾರ್ಷಿಕ ವೇತನ ಪಡೆಯಲಿದ್ದಾರೆ. ಇನ್ನೂ ಮೊದಲ ಬಾರಿಗೆ ಚುನಾವಣಾ ಆಯೋಗ, ಮತದಾರ ನೋಂದಣಿ ಅಧಿಕಾರಿಗಳು ಮತ್ತು ಸಹಾಯಕ ಮತದಾರ ನೋಂದಣಿ ಅಧಿಕಾರಿಗಳಿಗೆ ಗೌರವ ಧನ ನೀಡಲು ಆಯೋಗ ನಿರ್ಧರಿಸಿದೆ. ಮತದಾರ ನೋಂದಣಿ ಅಧಿಕಾರಿಗಳಿಗೆ ೩೦ ಸಾವಿರ ರೂಪಾಯಿ ಹಾಗೂ ಸಹಾಯಕ ಮತದಾರ ನೋಂದಣಿ ಅಧಿಕಾರಿಗಳಿಗೆ ೨೫ ಸಾವಿರ ರೂಪಾಯಿ ಗೌರವ ಧನ ನೀಡಲು ನಿರ್ಧರಿಸಲಾಗಿದೆ.

<><*<><>*><>

ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ನಡೆಯುವ ರಾಷ್ಟ್ರೀಯ ವೈದ್ಯಕೀಯ ಪ್ರವೇಶ ಪರೀಕ್ಷೆ- ನೀಟ್ ಪಿಜಿ-೨೦೨೫ ಇಂದು ದೇಶದ್ಯಂತ ನಡೆಯಲಿದೆ. ಸುಮಾರು ೨ ಲಕ್ಷ ೫೦ ಸಾವಿರ ವೈದ್ಯಕೀಯ ಪದವೀಧರರು  ಈ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ರಾಷ್ಟ್ರೀಯ ವೈದ್ಯಕೀಯ ವಿಜ್ಞಾನ ಪರೀಕ್ಷಾ ಮಂಡಳಿ ನಡೆಸುತ್ತಿರುವ ಈ ಪರೀಕ್ಷೆ, ಕಂಪ್ಯೂಟರ್ ಆಧಾರಿತವಾಗಿದ್ದು, ಎಂಡಿ, ಎಂಎಸ್ ಸೇರಿದಂತೆ ಮತ್ತಿತರರ ಸ್ನಾತಕೋತ್ತರ ಪದವೀಗಳಿಗೆ ಪ್ರವೇಶಕ್ಕಾಗಿ ನಡೆಯುತ್ತದೆ. ಪರೀಕ್ಷೆ ಇಂದು ಬೆಳಗ್ಗೆ ೯ ರಿಂದ ಮಧ್ಯಾಹ್ನ ೧೨.೩೦ ರವರೆಗೆ ನಡೆಯಲಿದ್ದು, ಪರೀಕ್ಷಾರ್ಥಿಗಳು ಬೆಳಗ್ಗೆ ೭ ಗಂಟೆಯಿಂದ ಪರೀಕ್ಷಾ ಕೇಂದ್ರ ಪ್ರವೇಶಿಸಬಹದಾಗಿದೆ. ಆದರೆ, ಕೇಂದ್ರಗಳ ಪ್ರವೇಶ ಬಾಗಿಲು ೮.೩೦ ರವರೆಗೆ ಮಾತ್ರ ಪ್ರವೇಶಕ್ಕೆ ಮುಕ್ತವಾಗಿದ್ದು, ಅಭ್ಯರ್ಥಿಗಳು ಸಮಯಕ್ಕೆ ಮುಂಚಿತವಾಗಿ ಪರೀಕ್ಷಾ ಕೇಂದ್ರಗಳನ್ನು ತಲುಪಿ, ಪ್ರವೇಶ ಖಚಿತಪಡಿಸಿಕೊಳ್ಳುವುದು ಅನಿರ್ವಾಯ ಎಂದು ಪರೀಕ್ಷಾ ಮಂಡಳಿ ತಿಳಿಸಿದೆ.

<><*<><>*><>

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇಂದು ಭಾವ್‌ನಗರ್ ರೈಲ್ವೇ ನಿಲ್ದಾಣದಿಂದ ಭಾವ್‌ನಗರ ಅಯೋಧ್ಯಾ ರೈಲಿಗೆ ಹಸಿರು ನಿಶಾನೆ ತೋರಲಿದ್ದಾರೆ. ಇದೇ ವೇಳೆ ಅವರು, ರೇವಾ-ಪುಣೆ ಮತ್ತು ಜಬಲ್‌ಪುರ್ -ರಾಯ್‌ಪುರ್ ನಡುವೆ ಸಂಚರಿಸುವ ಎರಡು ರೈಲುಗಳಿಗೆ ವರ್ಚುವಲ್‌ಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ. ಕಾರ್ಯಕ್ರಮದಲ್ಲಿ ಗುಜರಾತ್, ಮಧ್ಯಪ್ರದೇಶ ಹಾಗೂ ಛತ್ತೀಸ್‌ಗಢದ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಾದ ಮನ್ಸೂಖ್ ಮಾಂಡವೀಯ ಮತ್ತು ನಿಮುಬೆನ್ ಬಮಾನಿಯಾ ಪಾಲ್ಗೊಳ್ಳಲಿದ್ದಾರೆ. ಒಂದು ದಿನದ ಗುಜರಾತ್ ಭೇಟಿಯಲ್ಲಿರುವ ಸಚಿವ ಅಶ್ವಿನಿ ವೈಷ್ಣವ್, ಭಾವ್‌ನಗರ್‌ದಲ್ಲಿ ನಡೆಯಲಿರುವ 'ವಿಕಾಸ್ ಭಾರತ್ ಸಂವಾದ್' ಕುರಿತು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

<><*<><>*><>

ಭಾರತೀಯ ಆಹಾರ ಭದ್ರತೆ ಮತ್ತು ಮಾನದಂಡ ಪ್ರಾಧಿಕಾರ-ಎಫ್.ಎಸ್.ಎಸ್.ಎ.ಐ ಆಯೂಷ್ ಸಚಿವಾಲಯದೊಂದಿಗೆ ಪರಾಮರ್ಶಿಸಿ, ಆಯುರ್ವೇದ ಆಹಾರ ವರ್ಗದಲ್ಲಿ ಬರುವ ವಿವಿಧ ಆಹಾರ ಪದಾರ್ಥಗಳ ಪಟ್ಟಿ ಬಿಡುಗಡೆ ಮಾಡಿದೆ. ೨೦೨೨ ರ ಆಹಾರ ಭದ್ರತೆ ಮತ್ತು ಮಾನದಂಡ ನಿಯಮಾವಳಿ ಹಿನ್ನೆಲೆಯಲ್ಲಿ ಆಯುರ್ವೇದ ಗ್ರಂಥಗಳಲ್ಲಿ ಉಲ್ಲೇಖಿತ ಪದಾರ್ಥಗಳು, ಅಡುಗೆ ವಿಧಾನಗಳ ಆಧಾರದ ಮೇಲೆ ಆಹಾರವನ್ನು ಮಾನ್ಯಗೊಳಿಸುವುದು ಇದರ ಉದ್ದೇಶವಾಗಿದೆ. ಈ ಪಟ್ಟಿ ಆಯುರ್ವೇದ ಆಹಾರ ಪದಾರ್ಥಗಳ ಬಗ್ಗೆ ಗ್ರಾಹಕರು ಮತ್ತು ಉದ್ಯಮಗಳಿಗೆ ಸ್ಪಷ್ಟತೆಯನ್ನು ಒದಗಿಸುತ್ತದೆ.

<><*<><>*><>

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದ ವಿಶೇ? ನ್ಯಾಯಾಲಯದ ತೀರ್ಪನ್ನು ಸ್ವಾಗತಿಸುತ್ತಾ, ಅಶ್ಲೀಲ ವಿಡಿಯೋ ಮತ್ತು ಅತ್ಯಾಚಾರ ಪ್ರಕರಣದ ತನಿಖೆಯ ನೇತೃತ್ವ ವಹಿಸಿದ್ದ ವಿಶೇ? ತನಿಖಾ ತಂಡ -ಎಸ್‌ಐಟಿಯ ಮುಖ್ಯಸ್ಥ ಬಿ.ಕೆ. ಸಿಂಗ್, ತೀರ್ಪನ್ನು ವಿಳಂಬಗೊಳಿಸಲು ಅಥವಾ ತಡೆಯಲು ಪ್ರತಿ ಹಂತದಲ್ಲೂ ಪದೇ ಪದೇ ಪ್ರಯತ್ನಗಳು ನಡೆದಿವೆ ಎಂದು ಹೇಳಿದ್ದಾರೆ. ಅಪರಾಧ ತನಿಖಾ ಇಲಾಖೆ (ಸಿಐಡಿ) ಕಚೇರಿಯಲ್ಲಿ ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಸ್ತುತ ಸಿಐಡಿ ಎಡಿಜಿಪಿ (ಆಡಳಿತ) ಆಗಿ ಸೇವೆ ಸಲ್ಲಿಸುತ್ತಿರುವ ಬಿ.ಕೆ. ಸಿಂಗ್, "ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ತೀರ್ಪನ್ನು ವಿಳಂಬಗೊಳಿಸಲು ಸಾಧ್ಯವಾಗಲಿಲ್ಲ" ಎಂದು ಹೇಳಿದರು. "ಈ ಪ್ರಕರಣದ ಸಂತ್ರಸ್ಥೆ ಸಮಾಜದ ಕೆಳಸ್ತರಕ್ಕೆ ಸೇರಿದವರಾಗಿದ್ದು, ಬಡ ಸಾಮಾಜಿಕ-ಆರ್ಥಿಕ ಹಿನ್ನೆಲೆಯನ್ನು ಹೊಂದಿದ್ದರು. ಇದಕ್ಕೆ ವ್ಯತಿರಿಕ್ತವಾಗಿ, ಆರೋಪಿ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಬಲಾಗಿದ್ದರು ಆದರೂ, ನ್ಯಾಯದಿಂದ ಪ್ರೇರಿತಳಾದ ಸಂತ್ರಸ್ಥೆ ಒಂದು ವ? ನಮ್ಮೊಂದಿಗೆ ದೃಢವಾಗಿ ನಿಂತಳು. ಪ್ರಜ್ವಲ್ ಈ ಶಿಕ್ಷೆಯನ್ನು ಪಡೆಯಲು ಅವರೇ ಕಾರಣ," ಎಂದು ಸಿಂಗ್ ಹೇಳಿದರು. "ಈ ತೀರ್ಪು ಸಮಾಜದ ಅನೇಕ ಸಂತ್ರಸ್ಥರಿಗೆ ಭರವಸೆ ಮತ್ತು ಶಾಂತಿಯನ್ನು ತಂದಿದೆ ಎಂದು ನಾನು ನಂಬುತ್ತೇನೆ" ಪ್ರಜ್ವಲ್ ರೇವಣ್ಣ ವಿರುದ್ಧ ಸಿಐಡಿ ಆರು ಪ್ರಕರಣಗಳನ್ನು ನಿರ್ವಹಿಸುತ್ತಿದೆ. ಆರಂಭದಲ್ಲಿ, ನಾಲ್ಕು ಸಂತ್ರಸ್ಥರು ಮುಂದೆ ಬಂದು ದೂರು ದಾಖಲಿಸಿದ್ದಾರೆ - ಒಂದು ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ, ಮೂರು ಸಿಐಡಿಯಲ್ಲಿ, ಒಂದು ಕೆ.ಆರ್. ನಗರ ಪೊಲೀಸ್ ಠಾಣೆಯಲ್ಲಿ ಮತ್ತು ಇನ್ನೊಂದು ಹಾಸನ ಜಿಲ್ಲೆಯಲ್ಲಿ ಎಂದು ಸಿಂಗ್ ಮಾಹಿತಿ ನೀಡಿದ್ದಾರೆ. "ನಾವು ತನಿಖೆಯನ್ನು ಪೂರ್ಣಗೊಳಿಸಿದ್ದೇವೆ ಮತ್ತು ಕೆ.ಆರ್. ನಗರ ಪ್ರಕರಣದಲ್ಲಿ ಚಾರ್ಜ್‌ಶೀಟ್ ಸಲ್ಲಿಸಿದ್ದೇವೆ, ಇದು ಈ ಶಿಕ್ಷೆಗೆ ಕಾರಣವಾಯಿತು. ಪ್ರಕರಣವನ್ನು ಡಿಸೆಂಬರ್ ೩೧, ೨೦೨೪ ರಂದು ಕೆಳ ನ್ಯಾಯಾಲಯದಿಂದ ವಿಚಾರಣಾ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು" ಎಂದು ಅವರು ಹೇಳಿದರು. ಕರ್ನಾಟಕ ಸರ್ಕಾರವು ಏಪ್ರಿಲ್ ೨೮, ೨೦೨೪ ರಂದು ಅಧಿಸೂಚನೆಯ ಮೂಲಕ ಹಾಸನ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿದ್ದ ಪೆನ್ ಡ್ರೈವ್‌ಗಳಲ್ಲಿ ಪತ್ತೆಯಾದ ಪ್ರಜ್ವಲ್ ರೇವಣ್ಣ ಮಾಡಿದ ಅಪರಾಧಗಳ ತನಿಖೆಗಾಗಿ ಎಸ್‌ಐಟಿಯನ್ನು ರಚಿಸಿತು. ಇದರ ಆಧಾರದ ಮೇಲೆ, ಅವರ ವಿರುದ್ಧ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ಐಟಿ ಕಾಯ್ದೆಯಡಿಯಲ್ಲಿ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಯಿತು. ಮತ್ತೊಬ್ಬ ವ್ಯಕ್ತಿಯ ವಿರುದ್ಧ ಅಪಹರಣ ಪ್ರಕರಣ ದಾಖಲಾಗಿದ್ದು, ಹಾಸನದಲ್ಲಿ ಪೆನ್ ಡ್ರೈವ್ ವಿತರಣೆಗೆ ಸಂಬಂಧಿಸಿದಂತೆ ಮತ್ತೊಂದು ಪ್ರಕರಣ ದಾಖಲಾಗಿದೆ. ಈ ಪ್ರಕರಣಗಳಲ್ಲಿ ಒಂದಾದ ಕೆ.ಆರ್. ನಗರ ಪ್ರಕರಣದಲ್ಲಿ ನ್ಯಾಯಾಲಯವು ತನಿಖೆಯ ಫಲಿತಾಂಶಗಳನ್ನು ಎತ್ತಿಹಿಡಿದು

ಪ್ರಜ್ವಲ್ ರೇವಣ್ಣ ಅವರನ್ನು ದೋಷಿ ಎಂದು ತೀರ್ಪು ನೀಡಿದೆ ಎಂದು ಸಿಂಗ್ ಹೇಳಿದರು. ಪ್ರಜ್ವಲ್ ರೇವಣ್ಣ ವಿರುದ್ಧದ ಆರು ಪ್ರಕರಣಗಳಲ್ಲಿ ಒಂದನ್ನು ನಿರ್ಧರಿಸಲಾಗಿದೆ. ಇನ್ನೊಂದರಲ್ಲಿ, ವಿಚಾರಣೆ ಪ್ರಾರಂಭವಾಗಿದೆ ಮತ್ತು ಸಂತ್ರಸ್ಥೆಯ ಹೇಳಿಕೆಯನ್ನು ದಾಖಲಿಸಲಾಗಿದೆ. ಮೂರನೇ ಪ್ರಕರಣ ಆರೋಪಪಟ್ಟಿ ರಚನೆ ಹಂತದಲ್ಲಿದೆ. ಎರಡು ಪ್ರಕರಣಗಳು ಇನ್ನೂ ಕೆಳ ನ್ಯಾಯಾಲಯದ ಮುಂದೆ ಇದ್ದು, ಆರೋಪಪಟ್ಟಿಗಳ ಮೇಲಿನ ವಾದಗಳು ನಡೆಯುತ್ತಿವೆ. ಒಂದು ಪ್ರಕರಣ ತನಿಖೆ ಹಂತದಲ್ಲಿದ್ದು, ಶೀಘ್ರದಲ್ಲೇ ಆರೋಪಪಟ್ಟಿ ಸಲ್ಲಿಸಲಾಗುವುದು ಎಂದು ಸಿಂಗ್ ಹೇಳಿದರು.

**<><*<><>*><>**

ಕಜಕಿಸ್ತಾನದಲ್ಲಿ ನಡೆದ ಕೊಸನೋವ್ ಸ್ಮರಣಾರ್ಥ ವಿಶ್ವ ಅಥ್ಲೆಟಿಕ್ ಕಾಂಟಿನೆಂಟಲ್ ಟೂರ್‌ನ ಪುರಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಭಾರತದ ಮುರುಳಿ ಶ್ರೀಶಂಕರ್ ಚಿನ್ನದ ಪದಕ್ಕಕ್ಕೆ ಕೊರಳೊಡಿದ್ದಾರೆ. ತಮ್ಮ ಮೊದಲನೇ ಪ್ರಯತ್ನದಲ್ಲಿ ಅವರು, ೭.೯೪ ಮೀಟರ್ ಜಿಗಿತ ಸಾಧಿಸಿ ಪ್ರಥಮ ಸ್ಥಾನ ಪಡೆದರು.

**<><*<><>*><>**

ಗ್ರೀಸ್‌ನ ಅಥೆನ್ಸ್‌ನಲ್ಲಿ ನಡೆದ ೧೭ ವರ್ಷದೊಳಗಿನವರ ವಿಶ್ವ ಕುಸ್ತಿ ಪಂದ್ಯಾವಳಿಯಲ್ಲಿ ಪುರುಷರ ೧೧೦ ಕೆಜಿ ವಿಭಾಗದಲ್ಲಿ, ಭಾರತದ ಲ್ಯಾಕಿ ಬೆಳ್ಳಿ ಪದಕ ಗೆದ್ದಿದ್ದಾರೆ.  ಅಂತಿಮ ಸ್ಪರ್ಧೆಯಲ್ಲಿ ಅವರು, ಸ್ವತಂತ್ರವಾಗಿ ಸ್ಪರ್ಧಿಸಿದ್ದ ಮಾಗೋಮೆದ್ರಾಸುಲ್ ಉಮರೋ ವಿರುದ್ಧ ೪-೬ ಅಂತರದಲ್ಲಿ ಸೋಲನುಭವಿಸಿ ಬೆಳ್ಳಿ ಪದಕ ಗೆದ್ದರು.  ಈ ನಡುವೆ ಪುರುಷರ ೬೦ ಕೆ.ಜಿ. ಫ್ರೀ ಸ್ಟೈಲ್ ವಿಭಾಗದಲ್ಲಿ ಭಾರತದ ಸಿತೇಂದರ್ ಫೈನಲ್ ಲಗ್ಗೆ ಇಟ್ಟಿದ್ದಾರೆ. ಸೆಮಿಫೈನಲ್‌ನಲ್ಲಿ ಅವರು, ಕಜಕಿಸ್ತಾನದ ಬೆಕಾಸಿಲ್ ಅಸಾಂಬೆಕ್ ವಿರುದ್ಧ ೫-೧ ಅಂತರದ ಭರ್ಜರಿ ಜಯ ಸಾಧಿಸಿ, ಫೈನಲ್‌ಗೆ ಅರ್ಹತೆ ಪಡೆದರು.

**<><*<><>*><>**

ಭಾರತ ಚುನಾವಣಾ ಆಯೋಗವು ಉಪರಾ?ಪತಿ ಚುನಾವಣೆಯ ವೇಳಾಪಟ್ಟಿಯನ್ನು ಘೋಷಿಸಿದ ನಂತರ, ಬಿಜೆಪಿ ಅಧ್ಯಕ್ಷರ ಚುನಾವಣೆ ನಡೆಯುವ ಸಾಧ್ಯತೆಯಿದೆ. ಹಿರಿಯ ಬಿಜೆಪಿ ನಾಯಕರೊಬ್ಬರು ಐಎಎನ್‌ಎಸ್ ಸುದ್ದಿ ಸಂಸ್ಥೆಗೆ ನೀಡಿದ ಮಾಹಿತಿ ಪ್ರಕಾರ, "ಪಕ್ಷದ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಯುತ್ತಿದ್ದು, ಈ ಪ್ರಕ್ರಿಯೆಯ ಕೊನೆಯ ಹಂತದಲ್ಲಿದ್ದೇವೆ ಎಂದು ಹೇಳಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**